# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **110(09)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಶ್ರೀನಿವಾಸ್ (ಶಿಕ್ಷಕರ ಕ್ಷೇತ್ರ)** |
| **ಉತ್ತರಿಸುವ ಸಚಿವರು** | **ಉನ್ನತ ಶಿಕ್ಷಣ ಸಚಿವರು** |
| **ಉತ್ತರಿಸಬೇಕಾದ ದಿನಾಂಕ** | **09.12.2024** |

| | ಪ್ರಶ್ನೆ | ಉತ್ತರ |
|---|---|---|
| (ಅ) | ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಕಾಲೇಜುಗಳಲ್ಲಿ ಪ್ರವೇಶ ನೀಡುವಾಗ ಪ್ರವರ್ಗ-1 ಜಾತಿಗಳಿಗೆ ಮೀಸಲಾತಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು)? | ಸರ್ಕಾರದ ಗಮನಕ್ಕೆ ಬಂದಿದೆ.<br><br>ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಕಾಲೇಜುಗಳಲ್ಲಿ ಪ್ರವೇಶ ನೀಡುವಾಗ ಪ್ರವರ್ಗ-1 ಜಾತಿಗಳಿಗೆ ಮೀಸಲಾತಿ ನೀಡದೇ ಇರುವುದು, ವಿಶೇಷ ಕೋಶವನ್ನು ತೆಗೆದು ಹಾಕಿರುವುದು ಮತ್ತು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ನಿಗದಿಪಡಿಸಿರುವ ಪ್ರವೇಶ ಶುಲ್ಕದಲ್ಲಿ ವ್ಯತ್ಯಾಸವಿರುವ ಬಗ್ಗೆ, ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರವರ್ಗ-1ರ ಜಾತಿಗಳ ಒಕ್ಕೂಟ(ರಿ), ಇವರಿಂದ ಸರ್ಕಾರಕ್ಕೆ ಮನವಿ ಸ್ವೀಕೃತವಾಗಿರುತ್ತದೆ.<br><br>ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಶುಲ್ಕ ವಿನಾಯಿತಿ ಸೌಲಭ್ಯಗಳನ್ನು ಮಂಜೂರು ಮಾಡುವ ಕುರಿತಾಗಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ನಿರ್ದೇಶಕರು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಇವರು ಹೊರಡಿಸಿರುವ ಆದೇಶ/ಸುತ್ತೋಲೆಗಳನ್ವಯ ಕ್ರಮವಹಿಸುವಂತೆ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸರ್ಕಾರದ ದಿನಾಂಕ: 10.04.2023ರ ಪತ್ರದಲ್ಲಿ ನಿರ್ದೇಶನ ನೀಡಲಾಗಿದೆ.(ಅನುಬಂಧ-1)<br><br>ಮುಂದುವರೆದು, ಸರ್ಕಾರದಿಂದ ಕೈಗೊಂಡ ಕ್ರಮದ ಮಾಹಿತಿಯನ್ನು ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರವರ್ಗ-1ರ ಜಾತಿಗಳ ಒಕ್ಕೂಟ(ರಿ) ಇವರಿಗೆ ಸರ್ಕಾರದ ದಿನಾಂಕ:28.04.2023ರ ಪತ್ರದಲ್ಲಿ ಮಾಹಿತಿಯನ್ನು ಒದಗಿಸಲಾಗಿದೆ. (ಅನುಬಂಧ-2) |
| (ಆ) | ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸ್ನಾತಕೋತ್ತರ ಕೇಂದ್ರಗಳಲ್ಲಿ ಪ್ರವರ್ಗ-1 ರ ಜಾತಿಗಳಿಗೆ ಹಿಂದೆ ಇದ್ದ ವಿಶೇಷ ಕೋಶವನ್ನು ತೆಗೆದು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |
| (ಇ) | ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರವರ್ಗ-1ರ ಜಾತಿಗಳ ವಿದ್ಯಾರ್ಥಿಗಳಿಗೆ ಬೇರೆ ಬೇರೆ ವಿಶ್ವವಿದ್ಯಾಲಯಗಲಲ್ಲಿ ನಿಗದಿಪಡಿದಿರುವ ಪ್ರವೇಶ ಶುಲ್ಕದಲ್ಲಿ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆದುಕೊಂಡ ಕ್ರಮಗಳೇನು? | |

ಇಡಿ 54 ಅಅವಿ 2024

(ಡಾ|| ಎಂ.ಸಿ ಸುಧಾಕರ್)

ಉನ್ನತ ಶಿಕ್ಷಣ ಸಚಿವರು